**ಕರ್ನಾಟಕ ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

**ಉಪ ವಲಯ ಅರಣ್ಯಾಧಿಕಾರಿ ಮತ್ತು ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ 2012-13**

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-3/2012-13 ದಿನಾಂಕ 21-12-2012 ಮತ್ತು ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-4/2012-13 ದಿನಾಂಕ 13-03-2013.**

# ಪ್ರಕಟಣೆ

ಈ ಕಚೇರಿಯ ದಿನಾಂಕ 3-6-2013 ಮತ್ತು ದಿನಾಂಕ 17-6-2013ರ ಪ್ರಕಟಣೆಯನ್ನು ಮುಂದುವರೆಸುತ್ತಾ, ಸರ್ಕಾರವು ಪತ್ರ ಸಂಖ್ಯೆ: ಅಪಜೀ 152 ಅಅಸೇ 2014 ದಿನಾಂಕ 20-10-2014ರ ಆದೇಶದಲ್ಲಿ ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ ನೇರ ನೇಮಕಾತಿಗೆ ಸಂಬಂಧಿಸಿದಂತೆ, ನೇಮಕಾತಿ ಅಧಿಸೂಚನೆಯನ್ನು ದಿನಾಂಕ 1-1-2013ಕ್ಕೆ ಮುಂಚಿತವಾಗಿ ಹೊರಡಿಸಿ, ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದ ಹಿನ್ನೆಲೆಯಲ್ಲಿ ಹಾಗೂ ನೇಮಕಾತಿ ಪ್ರಕ್ರಿಯೆ ಅಂತಿಮ ಘಟ್ಟ ತಲುಪಿರುವ ಹಿನ್ನೆಲೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯು ತೆಗೆದುಕೊಂಡ ನಿರ್ಣಯದಂತೆ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ನಿರ್ಣಯಿಸಿ, ಸದರಿ ನೇಮಕಾತಿಯನ್ನು ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 12 ರಂತೆ ಕ್ರಮ ಕೈಗೊಳ್ಳಲು ಆದೇಶಿಸಿರುತ್ತದೆ ಹಾಗೂ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಅನುಮೋದನೆ ನೀಡಿರುತ್ತದೆ.

113 ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳ ಪರಿಶೀಲನೆ, ದೇಹದಾರ್ಢ್ಯತೆ ಪರೀಕ್ಷೆ ಮತ್ತು ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆ ಮತ್ತು ಲಿಖಿತ ಪರೀಕ್ಷೆಗಳಿಗೆ 1:20 (ಹುದ್ದೆ:ಅಭ್ಯರ್ಥಿ) ರಂತೆ, ಬಿ.ಎಸ್‌ಸಿ. (ಅರಣ್ಯ ಶಾಸ್ತ್ರ) 116 ಅಭ್ಯರ್ಥಿಗಳು ಹಾಗೂ ಬಿ.ಎಸ್‌ಸಿ. 1064 ಅಭ್ಯರ್ಥಿಗಳು ಒಟ್ಟು 1180 ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅರ್ಹವಿರುವುದಾಗಿ ತಿಳಿಸಿ ದಿನಾಂಕ 3-6-2013 ರಂದು ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ 18-3-2013 ರಂದು ಪ್ರಕಟಿಸಲಾಗಿರುತ್ತದೆ. ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ದಿನಾಂಕ 16-1-2015 ಮತ್ತು 17-1-2015 ರಂದು ಮೂಲ ದಾಖಲೆಗಳ ಪರಿಶೀಲನೆ, ದೇಹದಾರ್ಢ್ಯತೆ ಪರೀಕ್ಷೆ ಮತ್ತು ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಗಳನ್ನು ನಿಗದಿಪಡಿಸಿರುವ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು. ದಿನಾಂಕ 18-1-2015 ರಂದು ಪೂರ್ವಾಹ್ನ 10.00 ಗಂಟೆಯಿಂದ ಅಪರಾಹ್ನ 1.00 ಗಂಟೆಯವರೆಗೆ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಈ ಬಗ್ಗೆ ಪ್ರವೇಶ ಪತ್ರವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ 5-1-2015 ರಂದು ಪ್ರಕಟಿಸಲಾಗುವುದು. ಪ್ರವೇಶ ಪತ್ರದಲ್ಲಿ ಪೂರ್ಣ ಮಾಹಿತಿ ಇರುತ್ತದೆ.

ಉಪ ವಲಯ ಅರಣ್ಯಾಧಿಕಾರಿ ಹುದ್ದೆಗೆ ಸಂಬಂಧಿಸಿದಂತೆ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಸ್ಥಳೀಯ ವೃಂದವನ್ನು ರಚಿಸಿ, ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಅವರವರ ಆಯ್ಕೆಗನುಸಾರ ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡುವ ಕುರಿತು ಈಗಾಗಲೇ ದಿನಾಂಕ 19-7-2014 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಇದನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ. ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸಂಬಂಧಿಸಿದಂತೆ ಉಪ ವಲಯ ಅರಣ್ಯಾಧಿಕಾರಿ ನೇರ ನೇಮಕಾತಿ ಕೋಟಾದಡಿಯಲ್ಲಿ 29 ಹುದ್ದೆಗಳನ್ನು ಭರ್ತಿ ಮಾಡಲು ಬಾಕಿ ಇರುತ್ತದೆ. ಈ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆದ್ಯತೆ ಮೇರೆಗೆ ಅಧಿಸೂಚನೆ ಹೊರಡಿಸಿ, ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

ಅರಣ್ಯ ರಕ್ಷಕ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಹೈದರಾಬಾದ್-ಕರ್ನಾಟಕ ಮೀಸಲಾತಿ ಕುರಿತು ಈಗಾಗಲೇ ಸ್ಥಳೀಯ ವೃಂದವನ್ನು ರಚಿಸಿ ಅಧಿಸೂಚಿಸಿರುವುದರಿಂದ, ಈ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳೀಯ ನೌಕರರನ್ನು ಗುರುತಿಸಿ ಅವರಿಂದ ಆಯ್ಕೆ ಪಡೆದು, ಆಯ್ಕೆಗನುಸಾರ ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ವೃಂದವಾರು ಗುರುತಿಸಿ, ರೋಸ್ಟರ್ ಬಿಂದು ಸರಿದೂಗಿಸಿ, ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಸರ್ಕಾರದ ಪತ್ರ ದಿನಾಂಕ 20-10-2014 ರಲ್ಲಿ ಅನುಮತಿ ನೀಡಿರುತ್ತದೆ.

ಈಗಾಗಲೇ ಅರಣ್ಯ ರಕ್ಷಕ ಹುದ್ದೆಯ ವೃಂದದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಸ್ಥಳೀಯ ವೃಂದವನ್ನು ರಚಿಸಿ, ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಅವರವರ ಆಯ್ಕೆಗನುಸಾರ ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡಿ ಅಧಿಸೂಚನೆಯನ್ನು ದಿನಾಂಕ 30-9-2014 ರಲ್ಲಿ ಹೊರಡಿಸಲಾಗಿರುತ್ತದೆ. ಈ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸಲಾಗಿದೆ. ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡ ನೌಕರರಿಗಾಗಿ ಒಟ್ಟು 224 ಹುದ್ದೆಗಳು ಸ್ಥಳೀಯ ವೃಂದ ಸಿಬ್ಬಂದಿಗಳಿಗಾಗಿ ಲಭ್ಯವಿರುತ್ತದೆ. ಪ್ರಸ್ತುತ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡ ಅರಣ್ಯ ರಕ್ಷಕರುಗಳ ಪೈಕಿ ಒಟ್ಟು 295 ಸಿಬ್ಬಂದಿಗಳು ಸ್ಥಳೀಯ ವೃಂದ ಸೇರಲು ಆಯ್ಕೆ ಬಯಸಿರುತ್ತಾರೆ. ಹೀಗಾಗಿ ನಿಯಮಗಳ ಅನುಸಾರ ಲಭ್ಯವಿರುವ ಹುದ್ದೆಗಳ ಸಂಖ್ಯೆಯಷ್ಟರ ಮಟ್ಟಿಗೆ ಮಾತ್ರ ಜ್ಯೇಷ್ಠತೆಯ ಆಧಾರದ ಮೇರೆಗೆ ಆಯ್ಕೆಯನ್ನು ಅಂಗೀಕರಿಸಲಾಗಿದೆ. ಹೀಗಾಗಿ, ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇರ ನೇಮಕಾತಿಯಲ್ಲಿ ಹುದ್ದೆ ಹಂಚಿಕೆ ಮಾಡುವ ಪ್ರಮೇಯ ಪ್ರಸ್ತುತ ಉದ್ಭವಿಸುವುದಿಲ್ಲ.

329 ಅರಣ್ಯ ರಕ್ಷಕ ಹುದ್ದೆಯ ನೇರ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ 3-6-2013 ರಂದು ಮೂಲ ದಾಖಲೆಗಳ ಪರಿಶೀಲನೆ, ದೇಹದಾರ್ಢ್ಯತೆ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆ, ದೈಹಿಕ ಕಾರ್ಯಸಮರ್ಥತೆ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳಿಗೆ 1:20 (ಹುದ್ದೆ:ಅಭ್ಯರ್ಥಿ) ರಂತೆ ಒಟ್ಟು 6325 ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅರ್ಹವಿರುವುದಾಗಿ ತಿಳಿಸಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ದಿನಾಂಕ 3-6-2013 ರಂದು ಪ್ರಕಟಿಸಿರುವ 1:20 (ಹುದ್ದೆ:ಅಭ್ಯರ್ಥಿ) ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ದಿನಾಂಕ 14-1-2015 ರಿಂದ 17-1-2015 ರವರೆಗೆ ಮೂಲ ದಾಖಲೆಗಳ ಪರಿಶೀಲನೆ, ದೇಹದಾರ್ಢ್ಯತೆ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆ, ದೈಹಿಕ ಕಾರ್ಯಸಮರ್ಥತೆ ಪರೀಕ್ಷೆಗಳನ್ನು ನಡೆಸಲಾಗುವುದು. ದಿನಾಂಕ 18-1-2015 ರಂದು ಅಪರಾಹ್ನ 3.00 ಗಂಟೆಯಿಂದ 5.00 ಗಂಟೆಯವರೆಗೆ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಈ ಬಗ್ಗೆ ಪ್ರವೇಶ ಪತ್ರವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ 5-1-2015 ರಂದು ಪ್ರಕಟಿಸಲಾಗುವುದು. ಪ್ರವೇಶ ಪತ್ರದಲ್ಲಿ ಪೂರ್ಣ ಮಾಹಿತಿ ಇರುತ್ತದೆ.

231 ಅರಣ್ಯ ವೀಕ್ಷಕ ಹುದ್ದೆಯ ನೇರ ನೇಮಕಾತಿಗೆ ಸಂಬಂಧಿಸಿದಂತೆ ಒಟ್ಟು 43366 ಅರ್ಜಿಗಳು ಸ್ವೀಕೃತಗೊಂಡಿರುತ್ತವೆ. ಹೈದರಾಬಾದ್-ಕರ್ನಾಟಕ ಮೀಸಲಾತಿ ಕುರಿತು ಈಗಾಗಲೇ ದಿನಾಂಕ 22-5-2014ರ ಈ ಕಚೇರಿಯ ಅಧಿಸೂಚನೆಯಲ್ಲಿ ಸ್ಥಳೀಯ ವೃಂದವನ್ನು ರಚಿಸಲಾಗಿರುತ್ತದೆ. ಅರಣ್ಯ ವೀಕ್ಷಕ ಹುದ್ದೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಈ ಕ್ರಮವು ಪೂರ್ಣಗೊಂಡ ನಂತರ ನಿರ್ದಿಷ್ಟವಾಗಿ ಖಾಲಿ ಉಳಿಯುವ ಹೈದರಾಬಾದ್-ಕರ್ನಾಟಕ ಪ್ರದೇಶದ ಅರಣ್ಯ ವೀಕ್ಷಕ ಹುದ್ದೆಗೆ ನೇರ ನೇಮಕಾತಿ ಮಾಡುವ ಸಲುವಾಗಿ ಆದ್ಯತೆ ಮೇರೆಗೆ ಅಧಿಸೂಚನೆಯನ್ನು ಹೊರಡಿಸಲಾಗುವುದು. ಈ ಕ್ರಮ ಕೈಗೊಂಡ ನಂತರ 231 ಅರಣ್ಯ ವೀಕ್ಷಕ ಹುದ್ದೆಗೆ ನೇರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು.

ಬೆಂಗಳೂರು,
ದಿನಾಂಕ: 7-11-2014

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)
ಹಾಗೂ ಆಯ್ಕೆ ಪ್ರಾಧಿಕಾರ.